ರಿಜಿಡ್ ಪಿ.ವಿ.ಸಿ.
ಶ್ರೀಕೃಷ್ಣ ಪೈಪ್
ಕರ್ಕಿ, ಹಟ್ಟಿಯಂಗಡಿ
ಕುಂದಾಪುರ Tq, ಉಡುಪಿ Dist,
Ph: (08254) 271261, 271361 (R),
264361, 264444 (Factory)

ಉದಯವಾಣಿ
Published from Bangalore, Manipal & Mumbai
ಗುರುವಾರ
ಆಗಸ್ಟ್ 12,
2010

'ನಮ್ಮ ಬೆಂಗಳೂರು' ಪುರವಣಿಗೆ ನುಡಿ, ಬರಹ, ಕುವೆಂಪು ಕನ್ನಡ, ಶ್ರೀಲಿಪಿ ತಂತ್ರಾಂಶಗಳಲ್ಲಿರುವ ಬರೆಹಗಳನ್ನು uvnammabengalooru@gmail.com ವಿಳಾಸಕ್ಕೆ ಕಳುಹಿಸಬಹುದು. ದೂರವಾಣಿ: 080-25590433, ಫ್ಯಾಕ್ಸ್: 080-25586898

# ಡ್ರಮ್‌ಶೆಡ್ ಸ್ಲಮ್‌ನಲ್ಲಿ ಮಾನವೀಯ ಬೆಳಕು

## ದೀವಿಗೆಯಾಗಿದೆ ಮಾನವ್ ಚಾರಿಟೀಸ್



- ಡ್ರಮ್‌ಶೆಡ್ ಎಂಬ ಸ್ಲಮ್‌ನಲ್ಲಿ ಮನೆಗಳಿರುವುದು 4 ಅಡಿ ಎತ್ತರ. ಸ್ನಾನ, ಶೌಚಕ್ಕೆ ಸಾರ್ವಜನಿಕ ಗೃಹಗಳು. ನೀರು ಬಿಬಿಎಂಪಿಯದ್ದು. ಅಲ್ಲಿ ಸ್ನಾನ ಮಾಡುವ ಜಾಗದಲ್ಲಿ ಜಾರುವ ಕೊಳಕು. ಬಟ್ಟೆ ತೊಳೆಯುವ ಜಾಗದ್ದೂ ಅದೇ ಕಥೆ. ಇರುವ ಮನೆಗಳಲ್ಲಿ ಬಾಡಿರುವ ಮುಖ, ಹರಿದಿರುವ ಬಟ್ಟೆ, ಬರಿಮೈಯ ಮಕ್ಕಳು. ಪಾಪ, ಇವರಿಗೆ ವಿದ್ಯಾಭ್ಯಾಸ ಮಾರುದೂರ.
- ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಸ್ಲಮ್ ಇದೆ. ಇಲ್ಲಿನ ಶಾಸಕರು ಕೆ. ರಘು. ಆದರೆ ಮತಾಂತರದ ಸುದ್ದಿ ಇಲ್ಲಿಯೂ ಇದೆ. ಯಾವುದೇ ಕಾರ್ಯಕ್ರಮ ನಡೆದರೂ ಸಂಘರ್ಷಗಳಿದ್ದೇ ಇದೆ.
- ಗಾಯದ ಮೇಲೆ ಬರೆ: ಭಾರತ ರೈಲ್ವೇ ಕಾಮಗಾರಿ ಇಲ್ಲಿ ನಡೆಯುವುದರಿಂದ ರೈಲ್ವೆ ನಿಲ್ದಾಣಕ್ಕಾಗಿ, ಕಟ್ಟಡಗಳಿಗಾಗಿ ಡ್ರಮ್‌ಶೆಡ್‌ನ ನಿವಾಸಿಗಳು ಜಾಗ ತೆರವು ಮಾಡಬೇಕಾಗಿರುವುದು ಅನಿವಾರ್ಯವಾಗಿದೆ. ಈ ಕುರಿತು ಮಾತುಕತೆಗಳು ನಡೆದು ನಿವಾಸಿಗಳಿಗೆ ವೈಟ್‌ಫೀಲ್ಡ್‌ನಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲು ಚಿಂತಿಸಲಾಗುತ್ತಿದೆ. ಇನ್ನು ಕೆಲವೇ ತಿಂಗಳಲ್ಲಿ ಈ ಕಾರ್ಯ ಆರಂಭವಾಗಲಿದೆ. ವಸತಿಯಾದರೂ ನಿಜ ಅರ್ಥದ ವಸತಿ ಆದೀತು ಎಂಬ ಆಸೆಯ ಬೆಳಕು ಅಲ್ಲಲ್ಲಿ ಮಿನುಗುತ್ತಿದೆ.



■ ನಿರೂಪ

ಅದೊಂದು ಪುಟ್ಟ ಜಾಗ. ಇಲ್ಲಿ 480 ಮನೆಗಳು. ಅದರಲ್ಲಿ 1ರಿಂದ 16 ವರ್ಷದೊಳಗಿನ ಮಕ್ಕಳು 500. ಮನೆಗಳ ಎತ್ತರ ನಾಲ್ಕೇ ಅಡಿ. 70ಕ್ಕೂ ಅಧಿಕ ಮಂದಿ ಅಶಕ್ತ ಮಕ್ಕಳು, ಮಹಿಳೆಯರು. ಇಲ್ಲಿರುವ ಬಹುತೇಕರು ಅನಕ್ಷರಸ್ತರು. ಬಂದಿರುವುದು ಪಕ್ಕದ ತಮಿಳುನಾಡಿನಿಂದ. ಕೆಲಸ ರೈಲ್ವೇ ಲೋಡಿಂಗ್, ಅನ್‌ಲೋಡಿಂಗ್. ಇನ್ನು ಕೆಲವರು ಕ್ಷೌರ, ಹೊಲಿಗೆ. ಇಲ್ಲಿನ ಪ್ರತಿ ಮಹಿಳೆಯರು ಕೂಲಿ ಕೆಲಸಕ್ಕೆ ಹೋಗುತ್ತಾರೆ. ಅಲ್ಲೇ ಇರುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ತಂದೆ ತಾಯಿಯ ರಕ್ಷಣೆಯಿಲ್ಲದ ಮಕ್ಕಳು ತಾವು ಕೆಲಸಕ್ಕೆ ಹೋಗುತ್ತಾರೆ. ಇಲ್ಲಿನ ಅಮ್ಮಂದಿರಿಗೆ ಮಕ್ಕಳೇ ಹೊರೆ ಎನ್ನುವುದೇ ಅತ್ಯಂತ ಅಸಹ್ಯ ಹುಟ್ಟಿಸುವ ಸಂಗತಿ. ಇದು ಬೆಂಗಳೂರು ನಗರದ ಹಲಸೂರಿನಿಂದ 4 ಕಿಮಿ ಮುಂದುಹೋದರೆ, ಬಾಣಸವಾಡಿ ಮತ್ತು ಹಳೇ ಮದ್ರಾಸ್ ರಸ್ತೆ ನಡುವೆ ಸಿಕ್ಕುವ ಬೈಯಪ್ಪನಹಳ್ಳಿಯ ಡ್ರಮ್‌ಶೆಡ್ ಎಂಬ ಸ್ಲಮ್.

ಆದರೆ ಅಲ್ಲಿನ ಸುಮಾರು 300 ಮಂದಿ ಮಕ್ಕಳೀಗ ನಗಲು ಕಲಿತಿದ್ದಾರೆ. ಹಸಿವೆಯಿಂದ ಸದಾ ಅಳುವನ್ನೇ ತುಂಬಿಕೊಂಡಿದ್ದ ಆ ಮುಗ್ಧ ಕಂದಮ್ಮಗಳು ಈಗ ಹಸಿವಿನ ಚಿಂತೆಯಿಂದ ಪಾರಾಗಿವೆ. ಇದಕ್ಕೆ ಕಾರಣ ಮಾನವ್ ಚಾರಿಟೀಸ್ ಎಂಬ ಬೆಂಗಳೂರು ಮೂಲದ ಸ್ವಯಂಸೇವಾ ಸಂಸ್ಥೆ.

ಯಾವ ಮಕ್ಕಳೂ ಹಸಿವಿನಿಂದ ನರಳಬಾರದು ಎಂಬ ಉದ್ದೇಶದಿಂದಲೇ ಶುರುವಾದ ಈ ಸಂಸ್ಥೆ ಇಲ್ಲಿನ 3ರಿಂದ 15 ವರ್ಷದೊಳಗೆ 300 ಮಕ್ಕಳಿಗೆ 2009ರ ಏಪ್ರಿಲ್‌ನಿಂದ ಪ್ರತಿದಿನ ಬೆಳಿಗ್ಗೆ 7.30ರಿಂದ 8.30ರವರೆಗೆ ರುಚಿಕರವಾದ, ಪೌಷ್ಟಿಕ ಆಹಾರ ಮತ್ತು ರಾತ್ರಿ ಊಟವನ್ನು ನೀಡುತ್ತಿದೆ. ಸಂಸ್ಥೆ ಶುರುವಾಗಿದ್ದು 1999ರಲ್ಲಿ. ಸ್ಥಾಪಕ ರಾಜೇಂದ್ರ ಕುಲಕರ್ಣಿ. ರೋಟರಿಯ ಪೀಣ್ಯ ವಿಭಾಗದ ಮಾಜಿ ಅಧ್ಯಕ್ಷರು. ಸದ್ಯಕ್ಕವರು ಪ್ರಗತಿ ಅತಿಥಿಗೃಹದ ಪ್ರೊಪ್ರೈಟರ್ ಕೂಡ. ಹಲವಾರು ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನ ನಿರ್ವಹಿಸಿದ್ದಾರೆ. ರೋಟರಿಯ ಅಂತಾರಾಷ್ಟ್ರೀಯ ಪಬ್ಲಿಕ್ ರಿಲೇಷನ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಈ ಸಂಸ್ಥೆ ಇದೀಗ ದೇಶದ ಹಲವು ಕಡೆಗಳಲ್ಲಿ ಮಕ್ಕಳ ಹಸಿವು ನೀಗಿಸುವ ಕೆಲಸ ಮಾಡುತ್ತಿದೆ. ಬೆಂಗಳೂರಿನ ಜೆಪಿನಗರದ ಸಾರಕ್ಕಿ ಬಡಾವಣೆ, ಹಳೆ ಮದ್ರಾಸ್ ರಸ್ತೆಯ ಕೃಷ್ಣರಾಜಪುರದ 600 ಮಕ್ಕಳು, ಯಶವಂತಪುರದ ಹೆಸರಘಟ್ಟದ 120 ಮಕ್ಕಳು, ಬಾಗಲೂರಿನ 200 ಮಕ್ಕಳಿಗೆ ಪ್ರತಿದಿನ ಆಹಾರ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಹುಬ್ಬಳ್ಳಿ, ಬೀದರ್, ಬೆಳಗಾವಿ, ಚಿತ್ರದುರ್ಗ, ಪುಣೆ, ಮುಂಬೈ, ಕೊಲ್ಕತ್ತ, ರಾಯ್‌ಗಂಜ್, ಹೈದರಾಬಾದ್, ವಿಜಾಗ್, ವಿಜಯವಾಡ, ಚೆನ್ನೈ, ಕೋಯಮತ್ತೂರು, ಜಮಶೆಡ್‌ಪುರ, ಚಂಡಿಗಡಕ್ಕೂ ಇದರ ಮಕ್ಕಳ ಕಳಕಳಿ ಚಾಚಿಕೊಂಡಿದೆ. ಪೌಷ್ಟಿಕ ಆಹಾರ ಕಾರ್ಯಕ್ರಮದಡಿಯಲ್ಲಿ ಇದು ಇನ್ನೂ ವ್ಯಾಪಿಸಿಕೊಳ್ಳುವ ಚಿಂತನೆಯಲ್ಲಿದೆ.

### ಹಣಕಾಸು ನಿರ್ವಹಣೆ ಹೇಗೆ?

ಈ ಸಂಸ್ಥೆಯೊಂದಿಗೆ ಎನ್‌ಜಿಓ ಫಂಡ್‌ರೈಸರ್ಸ್ ಎಂಬ ಇನ್ನೊಂದು ಸಂಸ್ಥೆ ಕೈಜೋಡಿಸಿದೆ. ಅದರ ನಿರ್ವಹಣೆ ಮಾಡುತ್ತಿರುವವರು ಚೆನ್ನೈನ ಪೆಂಟಾಸಾಫ್ಟ್ ಕಂಪನಿಯ ಜನರಲ್ ಮ್ಯಾನೇಜರ್ ಆಗಿದ್ದ ವಿ. ಶ್ರೀಧರ್.



ಎಂಬಿಎ ಮಾಡಿರುವ ಅವರು ಎನ್‌ಜಿಓಗಳಿಗೆ ಸಹಾಯ ಮಾಡುವ ಉದ್ದೇಶದಿಂದಲೇ ಹಣ ಹೊಂದಿಸುವ ಕಂಪನಿ ಪ್ರಾರಂಭಿಸಿದರು. ಹಲವು ಎನ್‌ಜಿಓಗಳು ಹಣಹೊಂದಿಸುವ ತಕರಾರಿನಿಂದ ತಮ್ಮಷ್ಟಕ್ಕೆ ತಾವೇ ಮುಚ್ಚಿಹೋಗುತ್ತಿರುವ ಪರಿಸ್ಥಿತಿಯ ಕಾರಣದಿಂದ ಅವರು ತಮ್ಮ ಕೆಲಸ ನಿಲ್ಲಿಸಿ ಈ ಕೆಲಸ ಶುರು ಮಾಡಿದ್ದಾರೆ. ಮಾನವ್ ಚಾರಿಟೀಸ್‌ಗೆ ಅವರು ಊರುಗೋಲಿನಂತೇ ನಿಂತು ಹಣ ಸಂಗ್ರಹಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಅವರಿಗೆ ಸಹಾಯಕರಾಗಿ ಅರುಣ ಎಂಬ ಎಂಎಸ್ ಡಬ್ಲ್ಯೂ ಪದವೀಧರೆ ಕೈಗೂಡಿಸಿದ್ದಾರೆ. ಕಳೆದ 15 ವರ್ಷದಿಂದ ಅವರದ್ದು ಇದೇ ಸಾಹಸ.

ಇಲ್ಲಿನ ಪ್ರತಿಮಕ್ಕಳಿಗೆ ಗುರುತಿನ ಪತ್ರ ನೀಡಲಾಗಿದೆ. ಪ್ರತಿದಿನದ ಕೂಪನ್ ಕೂಡ ನೀಡಲಾಗಿದೆ. ಯಾರಲ್ಲಿ ಈ ಕೂಪನ್ ಇರುತ್ತದೆಯೋ ಅವರು ಮಾತ್ರ ಆಹಾರ ಪಡೆದುಕೊಳ್ಳಬಹುದೆನ್ನುವ ಕಾರಣದಿಂದ ಶಿಸ್ತನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಮಕ್ಕಳು ಕಸದತೊಟ್ಟಿಯಲ್ಲಿ ಬಿದ್ದ ಆಹಾರ ತಿನ್ನುವುದನ್ನು ನೋಡಿ ಕಂಗೆಟ್ಟ ರಾಜೇಂದ್ರ ಕುಲಕರ್ಣಿಯವರಿಗೆ ಅಂದಿನಿಂದಲೇ ಮಾನವ್ ಚಾರಿಟೀಸ್ ಶುರುಮಾಡುವ ಪ್ರೇರಣೆಯಾಯಿತು. ಇಂದಿಗೂ ಬದಲಾಗದ ಪರಿಸ್ಥಿತಿ ಇದ್ದರೂ ದೀಪ ಹಚ್ಚುವ ಸಣ್ಣ ಪ್ರಯತ್ನ ಮಾಡುತ್ತಿರುವ ಮಾನವ್ ಚಾರಿಟೀಸ್ ಹಲವರಿಗೆ ಮಾದರಿಯಾಗಿ ನಿಲ್ಲುತ್ತದೆ. ■